International Journal of Kannada Research 2016; 2(4): 112-116

International Journal of Kannada Research
www.kannadajournal.com

ISSN: 2454–5813
IJSR 2016; 2(4): 112-116
© 2016 IJKS
www.kannadajournal.com
Received: 20-08-2016
Accepted: 21-09-2016

**ಗಾಣಿಗರ್ ಎನ್**
ಸಂಶೋಧನಾರ್ಥಿ, ಕನ್ನಡ ವಿಭಾಗ
ಕರ್ನಾಟಕ ಕೇಂದ್ರೀಯ
ವಿಶ್ವವಿದ್ಯಾಲಯ ಆಳಂದ ರಸ್ತೆ,
ಕಡಗಂಚಿ ಕಲಬುರಗಿ

**Correspondence**
**ಗಾಣಿಗರ್ ಎನ್**
ಸಂಶೋಧನಾರ್ಥಿ, ಕನ್ನಡ ವಿಭಾಗ
ಕರ್ನಾಟಕ ಕೇಂದ್ರೀಯ
ವಿಶ್ವವಿದ್ಯಾಲಯ ಆಳಂದ ರಸ್ತೆ,
ಕಡಗಂಚಿ ಕಲಬುರಗಿ

# ಕನ್ನಡ ಕಾವ್ಯ ಮತ್ತು ಕನಸು: ಸ್ವ–ಪ್ರೇರಕ ಸಂಬಂಧಗಳು

**ಗಾಣಿಗರ್ ಎನ್**

ಕನ್ನಡ ಕಾವ್ಯವನ್ನು ಬೇರೆ ಬೇರೆ ಅನ್ಯಶಿಸ್ತುಗಳಿಂದ ನೋಡಬೇಕೆನ್ನುವ ಆಲೋಚನೆಯೊಂದು ಮೂಡಿರುವುದು ವಿಮರ್ಶಾಲೋಕದಲ್ಲಿ ಹೊಸತನದ ಬೆಳವಣಿಗೆ ಕಾಣಲು ಸಾಧ್ಯವಾಗಿದೆ. ಪರಂಪರಾಗತವಾಗಿ ಬದಲಾವಣೆಗಳನ್ನು ತನ್ನೊಳಗೇ ಒಪ್ಪಿಕೊಳ್ಳುತ್ತಾ; ನೂತನ ಬದಲಾವಣೆಗೆ ಒಗ್ಗಿಕೊಳ್ಳುತ್ತಾ ಬಂದಿರುವ ಕನ್ನಡ ಕಾವ್ಯವು ಹತ್ತು ಹಲವು ದಿಕ್ಕುಗಳಿಂದ ಪ್ರೇರಣೆ ಪ್ರಭಾವಗಳನ್ನು ಪಡೆದುಕೊಂಡು ಕಾಲಕಾಲಕ್ಕೆ ತನ್ನ ಸ್ವರೂಪ ಮತ್ತು ಸಾಧನಗಳನ್ನು ಬದಲಿಸಿಕೊಂಡು ಮೈಪಡೆಯುತ್ತಾ ಬಂದಿದೆ. ಸಾಹಿತ್ಯ ರಚನೆಗೆ ಹಿಂದಿನಿಂದಲೂ ಅನೇಕಾನೇಕ ಪ್ರೇರಣೆ ಪ್ರಭಾವಗಳನ್ನು ಗುರುತಿಸುತ್ತಾ ಬಂದಿದ್ದೇವೆ. ನಮ್ಮ ಸುತ್ತ–ಮುತ್ತಲಿನ ಪರಿಸರ, ವಿದ್ವಾಂಸರೊಂದಿಗಿನ ಚರ್ಚೆ, ಗಂಭೀರವಾದ ಓದು, ಪುರಾಣ–ಪುಣ್ಯಕತೆಗಳು, ಜೀವನಾನುಭವಗಳು, ಪ್ರೀತಿ–ಪ್ರೇಮ–ಪ್ರಣಯಗಳು, ಸಮಾಜ–ಸಮುದಾಯಗಳು, ಪಾಶ್ಚಾತ್ಯರ ಹೊಸಪ್ರಕಾರಗಳು–ಫಾರಮ್‌ಗಳು, ನಮ್ಮವೆಯಾದ ದುಃಖ–ದುಮ್ಮಾನ–ಆತಂಕ ಹಾಗೂ ಕುದಿತಗೊಂಡ ಭಾವನೆಗಳು ಇತ್ಯಾದಿಯಾಗಿ ಹೆಸರಿಸಿಕೊಂಡು ಬಂದಿದ್ದೇವೆ. ಆದರೆ ಇವುಗಳಂತೆ ನಮ್ಮ ಕನಸುಗಳೂ ಕೂಡ ಒಂದು ಕಾವ್ಯ ಅಥವಾ ಸಾಹಿತ್ಯ ನಿರ್ಮಾಣಕ್ಕೆ ಪ್ರಭಾವ ಮತ್ತು ಪ್ರೇರಣೆ ಆಗುತ್ತದೆ ಎಂಬುದನ್ನು ಸಾಹಿತ್ಯಲೋಕದಲ್ಲಿ ಗುರುತಿಸಿದಂತೆ ತೋರುವುದಿಲ್ಲ. ಹಾಗೆ ನೋಡಿದರೆ ಸಾಹಿತ್ಯದಲ್ಲಿ ಕನಸು ನೀಡಿದ ಪ್ರೇರಣೆ ಉಳಿದವುಗಳಿಗಿಂತ ತುಸು ಹೆಚ್ಚಾಗಿಯೇ ಇದೆ. ಇಡೀ ಕಾವ್ಯವೇ ಕನಸಾಗಿ; ಒಂದು ಕಾದಂಬರಿ, ಕತೆ, ನಾಟಕ, ಇಡಿಯಾಗಿ ಕನಸಿನ ಆವರಣದಲ್ಲಿಯೋ, ಮಾಧ್ಯಮದಲ್ಲಿಯೋ, ನಿರೂಪಣೆಯಲ್ಲಿಯೋ, ಅಭಿವ್ಯಕ್ತಿಯಲ್ಲಿಯೋ ಮೈತಾಳಿರುವುದನ್ನು ಸಾಹಿತ್ಯ ಲೋಕದಲ್ಲಿ ಗುರುತಿಸಲು ಸಾಧ್ಯವಿದೆ ಮತ್ತು ಸಾಕಷ್ಟು ಉದಾಹರಣೆಗಳೂ ಸಹ ನಮಗೆ ದೊರೆಯುತ್ತವೆ. ಈ ರೀತಿಯ ಸಾಹಿತ್ಯ ನಿರ್ಮಿತಿಗೆ ಕನಸು ನೀಡಿದ ಪ್ರೇರಣೆ ಪ್ರಭಾವವನ್ನು ಮತ್ತು ಅದು ಹೊರಹಾಕುವ ಭಾವಸತ್ಯವನ್ನು ಗುರುತಿಸುವ ಉದ್ದೇಶವನ್ನು ಈ ಲೇಖನವು ಒಳಗೊಂಡಿದೆ. ಇಲ್ಲಿ ಯಾವ ಕಾವ್ಯಗಳನ್ನೂ ಉದಾಹರಣೆಯಾಗಿ ಕೊಡಲಾಗುವುದಿಲ್ಲ, ಕಾರಣ ಈ ಲೇಖನದ ಉದ್ದೇಶ ಕಾವ್ಯಗಳ ವಿಶ್ಲೇಷಣೆಯಲ್ಲ ಬದಲಾಗಿ ಕನಸು ಮತ್ತು ಕಾವ್ಯದ ನಡುವೆ ಹೇಗೆ ಪರಸ್ಪರ ಪ್ರೇರಣಾತ್ಮಕ ಸಂಬಂಧಗಳು ಬೆಳೆದುಕೊಂಡಿವೆ ಎಂಬುದನ್ನು ಮಾತ್ರ ಇಲ್ಲಿ ಹೇಳಬೇಕಾಗಿರುವುದರಿಂದ ಅದನ್ನು ಅಮುಖ್ಯ ಎಂದು ಇಲ್ಲಿ ತಿಳಿಯಲಾಗಿದೆ. ಇದನ್ನು ಹಲವಾರು ಚಿಂತಕರ, ಕವಿಗಳ, ವಿಮರ್ಶಕರ ಮಾತುಗಳಿಂದ, ಅವರ ಚಿಂತನೆಗಳಿಂದ ಸಾಬೀತುಮಾಡುವ ಉದ್ದೇಶವೂ ಇಲ್ಲಿದೆ.

ಒಬ್ಬ ಸಾಮಾನ್ಯ ವ್ಯಕ್ತಿ ತನಗೆ ಈ ರೀತಿ ಕನಸು ಬಿದ್ದಿತ್ತು ಎಂದು ಹೇಳಿಕೊಳ್ಳುವುದಕ್ಕೂ; ಒಬ್ಬ ಕವಿ ತನಗೆ ಬಿದ್ದ ಕನಸನ್ನು ಕಾವ್ಯವಾಗಿಸುವ ಮೂಲಕ ಹೀಗಿತ್ತು ಎಂದು ಹೇಳಿಕೊಳ್ಳುವುದಕ್ಕೂ ಏನಾದರೂ ವ್ಯತ್ಯಾಸವಿದೆಯೇ? ಇದ್ದರೆ ಯಾವ ರೀತಿಯದು? ಎಂಬ ಪ್ರಶ್ನೆ ಬಹುವಾಗಿ ಕಾಡಿದ್ದುಂಟು. ಇದಕ್ಕೆ ಮನೋವಿಶ್ಲೇಷಣೆ ವಿಧಾನದಿಂದ ಮಾತ್ರವೇ ಉತ್ತರ ಹುಡುಕುವುದು ಬಹು ದುಸ್ತರದ ಕೆಲಸ. ಕನಸುಗಳ ಸಾಮಾಜಿಕತೆಯ ನಂಬಿಕೆಯಲ್ಲಿ ಕೆಲವು ಭಿನ್ನವಾದ ನಿಲುವುಗಳಿವೆ. ಒಂದನೆಯದು ವ್ಯಕ್ತಿ ತಾನು ಹೇಗೆ ಕನಸು ಕಾಣುತ್ತಾನೋ ಹಾಗೆಯೇ ಅವನ ಗುಣಾವಗುಣಗಳನ್ನು ವಿಶ್ಲೇಷಿಸುವುದು. ಎರಡನೆಯದು ಕನಸು ಕಂಡದ್ದರ ವಿರುದ್ಧವಾಗಿ ಅಥವಾ ವಿಮುಖವಾಗಿ ಅವನ ಗುಣಾವಗುಣಗಳನ್ನು ವಿಶ್ಲೇಷಿಸುವುದು. ಮೂರನೆಯದು ಕನಸು ಹೇಗೇ ಇದ್ದರೂ ಅದರ ಆಂತರಿಕ ಮತ್ತು ಬಾಹ್ಯ ಅರ್ಥಗಳನ್ನು ಆರೋಪಿಸಿ ಕನಸು ಬಿದ್ದವನ ಗುಣಾವಗುಣಗಳನ್ನು ವಿವರಿಸುವುದು. ನಾಲ್ಕನೆಯದು ಮತ್ತು ಕಡೆಯದು ಕನಸಿನಲ್ಲಿ ಕಂಡದ್ದನ್ನು ಧಾರ್ಮಿಕ ಮತ್ತು ದೈಹಿಕ ಸ್ವಾಸ್ಥ್ಯದ ಮೇಲೆ ಭಾರಹಾಕಿ ಅವನ ಗುಣಾವಗುಣಗಳನ್ನು ಗುರುತಿಸುವುದು. ಇಲ್ಲಿ ಕನಸು ಕಾಣುವುದು ಎಲ್ಲರಲ್ಲೂ ಸಾಮಾನ್ಯವಾದರೂ ಅದನ್ನು ಅವಗಣನೆಗೆ ತೆಗೆದುಕೊಂಡದ್ದು ಮಾತ್ರ ಒಂದೇ ರೀತಿಯಲ್ಲ ಎಂಬುದನ್ನು ನಾವು ಮನಗಾಣಬೇಕಾದ ಬಹು ಮುಖ್ಯ

ಸಂಗತಿಯಾಗಿದೆ. ಆದರೆ ಅದೇ ಕನಸುಗಳು ಸಾಹಿತ್ಯಾತ್ಮಕ ನಂಬಿಕೆಗಳಲ್ಲಿ ಇದಕ್ಕೂ ಭಿನ್ನವಾಗಿಯೇ ಗುರುತಿಸಿಕೊಳ್ಳುವುದರಿಂದ ಗುಣಾವಗುಣಗಳಿಗಿಂತ ಇಲ್ಲಿ ಕವಿಯ ವ್ಯಕ್ತಿತ್ವದ ಜೊತೆಗೂಡಿ, ಕಾವ್ಯದ ಜೊತೆಗೂಡಿ ಕನಸನ್ನು ಗ್ರಹಿಸಬೇಕಾಗುತ್ತದೆ. ಆದ್ದರಿಂದ ಇಲ್ಲಿ ಮನೋವಿಶ್ಲೇಷಣೆಯ ಜೊತೆಗೆ ಒಂದು ಕಾವ್ಯದ ಸಾಹಿತ್ಯಿಕ ವಿಮರ್ಶಾ ಸ್ವರೂಪದ ವಿಶ್ಲೇಷಣೆಯೂ ಇಲ್ಲಿ ಮುಖ್ಯವಾಗುತ್ತದೆ. ಹೀಗಿರುವ ಕಾರಣ ಈ ಎರಡರ ಒಕ್ಕೂಟದ ಹೊಸದೊಂದು ವೈಧಾನಿಕತೆಯನ್ನು ಇಲ್ಲಿ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಒಬ್ಬ ಕವಿಗೆ 'ಕನಸುಗಳು ಆತ್ಮಾವಲೋಕನದ ಮಾನಸಿಕ ಸಾಧನಗಳು' ಎಂಬ ರೀತಿಯಲ್ಲಿಯೇ ಕಾಣಿಸಿಕೊಳ್ಳುತ್ತವೆ ಎಂಬುದು ಕಾವ್ಯಗಳ ಮೂಲಕ ತಿಳಿಯುತ್ತದೆ. ಹಾಗಾಗಿಯೇ ಕನಸುಗಳು ಮತ್ತು ಕಾವ್ಯಗಳು ಪರಸ್ಪರ ಪ್ರೇರಣಾ ಸಂಬಂಧಿಗಳು ಎಂದು ಇಲ್ಲಿ ಕರೆಯಲಾಗಿದೆ. ಇಲ್ಲಿ ಕನಸಿನಿಂದ ಕಾವ್ಯ; ಕಾವ್ಯದಿಂದ ಕನಸುಗಳು ತಮ್ಮ ತಮ್ಮಲ್ಲೇ ಅನುಸಂದಾನಗಳನ್ನು ಮಾಡಿಕೊಳ್ಳುವ ಮೂಲಕವಾಗಿ ಒಂದನ್ನೊಂದು ಪ್ರಭಾವಿಸುತ್ತವೆ. ಆದ್ದರಿಂದ ಇದನ್ನು ಸ್ವ–ಪ್ರೇರಿತ ಸಂಬಂಧಗಳು ಎಂದು ಇಲ್ಲಿ ಕರೆಯಲಾಗಿದೆ. ಅಂದರೆ ಇವುಗಳಲ್ಲಿಯ ಆಂತರಿಕ 'ಒಳ' ಸಂವೇದನೆಗಳು ಸಾಹಿತ್ಯಕ್ಕೂ ಮತ್ತು ಕಾವ್ಯಕ್ಕೂ ಒಂದೇ ಕೇಂದ್ರ ಮನೋವೃತ್ತಿಯ ಭಾವಸತ್ಯವನ್ನು ಹೊರಹಾಕಲು ಪರಸ್ಪರ ಸಮ್ಮಿಳಿತಗೊಳ್ಳುತ್ತವೆ.

ಕನಸುಗಳನ್ನು ಕಾವ್ಯದಲ್ಲಿ ಮೂರು ಆಯಾಮಗಳಲ್ಲಿ ಗುರುತಿಸಲು ಸಾಧ್ಯವಿದೆ. ಅವೆಂದರೆ ಕವಿಯು ಯಾವುದನ್ನು ಇದು ಕನಸಿನ ಪ್ರೇರಿತ ಕಾವ್ಯ, ಇದು ನಾ ಕಂಡ ಕನಸಿನ ನಿರೂಪಣೆ, ಇದು ನನಗೆ ಬಿದ್ದ ಕನಸು, ಇದು ಕನಸಿನೋಪಾದಿಯ ವಿವರಣೆ ಎಂದು ಹೇಳಿಕೊಳ್ಳುವ ಮೂಲಕವೇ ಅದು ಕನಸಾಧಾರಿತ ಕಾವ್ಯವೆಂದು ತಿಳಿದುಕೊಂಡು ಅದನ್ನು ವಿಶ್ಲೇಷಿಸುವುದು ಒಂದು ಆಯಾಮವಾದರೆ; ಇದಾವ ಸುಳಿವೂ ಇಲ್ಲದೇ ಕೇವಲ ಅಲ್ಲಿಯ ವಸ್ತುನಿರ್ವಹಣೆ, ಅನುಭವದ ಅಭಿವ್ಯಕ್ತಿ, ಅಲ್ಲಿಯ ದೃಷ್ಟಿಚಿತ್ರಗಳ ಆಧಾರದ ಮೇಲೆ ಇವು ಕನಸಿಗೊಳಗಾದ ಕಾವ್ಯ ನಿರೂಪಣೆಗಳು ಎಂದು ಗುರುತಿಸಿ ವಿಶ್ಲೇಷಿಸುವುದು ಇನ್ನೊಂದು ಆಯಾಮ. ಇವೆರಡಕ್ಕಿಂತ ಕೊಂಚ ಭಿನ್ನವಾದ ಮತ್ತು ಇಲ್ಲಿಯವರೆಗೂ ಗಮನಹರಿಸದೇ ಇರುವ ಆಯಾಮ ಒಂದಿದೆ. ಅದೆಂದರೆ ಕವಿಯು ತನ್ನ ಕಾವ್ಯ ನಿರೂಪಣೆಯಲ್ಲಿ ಬಳಸಿರುವ 'ಕನಸು' ಎಂಬ ಪರಿಭಾಷೆಯ ಪ್ರಾತಿನಿಧಿಕತೆ ಮತ್ತು ಔಚಿತ್ಯ ಯಾವುದು? ಎಂದು ತಿಳಿಯುವುದು ಬಹು ಮುಖ್ಯವಾದ ವಿಷಯವಾಗಿದೆ. ಇದಕ್ಕೆ ಆರಂಭದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳೋಣ. 'ಕನಸು' ಎಂಬ ಪರಿಭಾಷೆಯ ಪದಕ್ಕೆ ಸಾಹಿತ್ಯಕ ಅರ್ಥ ಇದೆಯೇ, ಇದ್ದರೆ ಅದು ಯಾವುದು.? ಈ ಕನಸಿಗೂ ಕಾವ್ಯಪ್ರೇರಣೆಗೂ ಮನೋವಿಜ್ಞಾನದ ದೃಷ್ಟಿಯಾವುದು.? ಸೃಜನಶೀಲತೆಗೂ ಕನಸಿಗೂ ಯಾವತರಹದ ಸಂಬಂಧಗಳನ್ನು ಕಲ್ಪಿಸಬಹುದು? ಯಾವಕಾರಣಕ್ಕಾಗಿ ಕನಸಿನ ನಿರಂತರ ಬಳಕೆಯು ಕಾವ್ಯದಲ್ಲಿ ಆಗುತ್ತದೆ? ಇತ್ಯಾದಿ ಪ್ರಶ್ನೆಗಳನ್ನು ಗಮನದಲ್ಲಿರಿಸಿಕೊಂಡು ಕಾವ್ಯ ಮತ್ತು ಕನಸಿನ 'ಒಳ' ಸಂಬಂಧಗಳನ್ನು ಗುರುತಿಸುತ್ತಾ ಹೋಗೋಣ.

ಮನಃಶಾಸ್ತ್ರ ಮತ್ತು ಕಲೆಯ ಬಗ್ಗೆ ಮಾತನಾಡುತ್ತ ಅರಿಸ್ಟಾಟಲ್ "ಮನಸಿನ ಆವೇಗ ಹಾಗೂ ಭಾವನೆಗಳನ್ನು ಹೊರಹಾಕಲು ಹಂಬಲಿಸುವ ಮಾನವನ ಬಯಕೆಗಳೇ ಕಲೆಯ ಸೃಷ್ಟಿ"[೧] ಎನ್ನುತ್ತಾನೆ. ಅವನ ಅಭಿಪ್ರಾಯದಲ್ಲಿ 'ಕಲೆಯು ಸತ್ಯದ ಅನುಕರಣೆ' ಮತ್ತು 'ನಿಸರ್ಗಕ್ಕೆ ಕನ್ನಡಿ ಹಿಡಿಯುವ ಕೆಲಸ ಕಲೆಯದು'. ಇಂತಹ ಅನುಕರಣೆಯಿಂದ ಮಾನವನಿಗೆ ಸಂತೋಷ ಸಿಗುತ್ತದೆ. ಈ ಮಾತಿನಲ್ಲಿ ಇರುವ ಅರ್ಥ ಕಲೆ ಅಥವಾ ಕಲಾಕೃತಿಯ ಮತ್ತು ಮನಃಶಾಸ್ತ್ರದ ಕೇಂದ್ರ 'ಮನಸೆ' ಎಂಬುದು. ಆದ್ದರಿಂದ 'ಕನಸು' ಎನ್ನುವುದು ಸಹ ಮನಸಿನ ತುಮುಲ, ಆವೇಗ ಹಾಗೂ ಇತರೆ ಭಾವನೆಗಳನ್ನು ಹೊರಹಾಕಲು ಹಂಬಲಿಸುವ ಮಾನವನ ಮನಸಿನ ಸೃಷ್ಟಿಗಳೇ ಆಗಿವೆ. ಹೀಗೆಂದಮೇಲೆ ಕನಸು ಮತ್ತು ಕಾವ್ಯಗಳು ಒಂದೇ ಉದ್ದೇಶ ಸಾಧನೆಯ ಎರಡು ಸಾಧನಗಳು ಎಂದಂತಾಯಿತು. ಇದನ್ನು ಗಮನಿಸಿದರೆ ಕಾವ್ಯ ಮತ್ತು ಕನಸುಗಳು ಬೇರೆ ಬೇರೆ ಎಂದು ಅನ್ನಿಸಲಾರವು. ಕಾವ್ಯ ಮತ್ತು ಕನಸುಗಳು ಮನಸಿನ ಸೃಷ್ಟಿಗಳೇ ಆಗಿರುವುದರಿಂದ ಅವೆರಡೂ ಸಹ ಸೃಜನಶೀಲ ಸೃಷ್ಟಿಗಳೇ ಅಥವಾ ಬರಹಗಳೇ ಆಗುತ್ತವೆ.

ಆದ್ದರಿಂದ 'ಕನಸುಗಳು ಕವಿಯ ಸೃಜನಶೀಲ ಬರಹಗಳು' ಯೂಂಗ್ ಸೃಜನಶೀಲತೆ ಮತ್ತು ಮನೋವಿಜ್ಞಾನದ ಸಂಬಂಧದ ಕುರಿತು ಕೆಲವು ನೆನಪಿಡಬೇಕಾದ ಆಲೋಚನೆಗಳನ್ನು ಕೊಟ್ಟಿದ್ದಾನೆ. ಸಾಮಾನ್ಯವಾಗಿ ಸೃಜನಶೀಲತೆ ಎಂದರೆ ಒಂದು ವಿಷಯವನ್ನು ಹೊಸ ದೃಷ್ಟಿಕೋನದಿಂದ ನೋಡುವ, ಹೊಸದಾಗಿ ಆಲೋಚಿಸುವ, ಸಮಸ್ಯೆಗಳ ಪರಿಹಾರಕ್ಕೆ ತನ್ನೊಳಗಿನ ಕಲಾತ್ಮಕತೆಯ ಶಕ್ತಿಯನ್ನು ಬಳಸುವ, ತಮ್ಮ ಅಪ್ರಜ್ಞಾ ಮನಸಿನೊಳಗೆ ಸುಂದರವಾದ ಕಲ್ಪನೆಗಳನ್ನು ಹೆಣೆಯುವ, ಹೊಸ ಅನುಭವಕ್ಕಾಗಿ ತುಡಿಯುವ, ಹೊಸ ಕೌಶಲಗಳನ್ನು ಕಲಿಯಬೇಕೆಂದು ತುಡಿಯುವ, ಈಗಾಲೇ ಕಂಡಿರುವುದಕ್ಕೆ ಹೊಸ ಮೆರಗು ಕೊಡುವ ಇತ್ಯಾದಿಗಳ ಸಹಜ ನೈಪುಣ್ಯತೆ ಎಂದು ಕರೆಯಲಾಗಿದೆ. ಕನಸುಗಳಿಗೂ ಸಹ ಇದೇ ಗುಣಲಕ್ಷಣಗಳನ್ನು ಹೊಂದಿರುವ ಸಹಜ ನೈಪುಣ್ಯಗಳೇ ಆಗಿವೆ. ಅಲ್ಲದೇ ಕನಸುಗಳೂ ಸಹ ಬದುಕಿನ ಬಹು ಭಾಗವನ್ನು ಹೊಸದೃಷ್ಟಿಕೋನಗಳಿಂದ ನೋಡುವ; ಹೊಸದಾಗಿ ಆಲೋಚಿಸುವ ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ತನ್ನೊಳಗಿನ ಕಲಾತ್ಮಕತೆಯಿಂದ ಎತ್ತಿಕೊಡುವ ಸೃಜನಶೀಲ ಸಾಧನಗಳೇ ಆಗಿವೆ ಎಂಬುದನ್ನು ಇಲ್ಲಿ ಒಪ್ಪಲೇಬೇಕಾಗುತ್ತದೆ. ಸೃಜನಶೀಲತೆಯನ್ನು ಯಾವುದೋ ಕೆಲವು ಮಂದಿಗೆ ಸ್ವತಃ ಇರುವ ಪ್ರತಿಭೆ ಎಂದಾಗಲೀ, ಹುಟ್ಟಿನಿಂದ ಬಂದ ಕಲೆ ಎಂದಾಗಲೀ ಗ್ರಹಿಸಬೇಕಾದ್ದಿಲ್ಲ. ಇದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ಸಹಜವಾದ ನೈಪುಣ್ಯತೆ ಎಂದು ಪರಿಗಣಿಸಬೇಕು. ಇದನ್ನು ಯೂಂಗ್ ವಿಶಿಷ್ಟವಾದ ಅರ್ಥದಲ್ಲಿ ವ್ಯಾಖ್ಯಾನಿಸುತ್ತಾನೆ. ಅವನ ಪ್ರಕಾರ ಸೃಜನಶೀಲತೆ ಎನ್ನುವುದು "ಇಚ್ಚೆಯ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಪ್ರತಿಭಾತ್ಮಕ ರಹಸ್ಯಗಳಿಂದ ಕೂಡಿದುದು"[೨] ಎಂದು ಹೇಳಿ; ಮನೋವಿಜ್ಞಾನವು ಇವೆರಡನ್ನೂ ಒಂದು ಪ್ರಕ್ರಿಯೆಯಾಗಿ ನೋಡಬಹುದೇ ಹೊರತು ಇವುಗಳಿಂದ ಬಂದ ತಾತ್ವಿಕ ಸಮಸ್ಯೆಗಳಿಗೆ ಉತ್ತರ ಕೊಡುವುದಿಲ್ಲ ಎನ್ನುವ ಮಹತ್ವದ ವಿಚಾರವನ್ನು ಇಲ್ಲಿ ಓದುಗರಿಗೆ ಒದಗಿಸಿದ್ದಾರೆ. ಇದು ಕನಸುಗಳಿಗೂ ಔಚಿತ್ಯಪೂರ್ಣವಾಗಿ ಅನ್ವಯಿಸಿ ಹೇಳಬಹುದಾದ ಮಾತು. ಇಷ್ಟೇ ಅಲ್ಲದೇ ಸೃಜನಶೀಲ ವ್ಯಕ್ತಿಯ ವ್ಯಕ್ತಿತ್ವವು ಒಂದು ಒಗಟಿನಂತೆ. ಈ ಒಗಟಿನಂತಿರುವ ಸೃಜನಶೀಲ ವ್ಯಕ್ತಿಯನ್ನು ಮತ್ತು ಅವನ ಸೃಜನ ಕಾರ್ಯಶೀಲ ವ್ಯಕ್ತಿತ್ವವನ್ನು ಮನೋವಿಜ್ಞಾನವು ಪದೇ ಪದೇ ಪ್ರಶ್ನಿಸುವ ಕಾರ್ಯವನ್ನು ಮಾಡುತ್ತಲೇ ಬರುತ್ತಿದೆ ಎನ್ನುತ್ತಾನೆ. ಹಾಗಾಗಿ ಕನಸುಗಳೂ ಸಹ ತನ್ನ ರಹಸ್ಯಮಯ ಗುಣದಿಂದ ತನ್ನ ಸೃಜನಶೀಲತೆಯನ್ನು ಮೆರೆಯುತ್ತದೆ ಮತ್ತು ತನ್ನ ಮನಸಿನ ಒಂದೊಂದೇ ವೈಚಿತ್ರ್ಯಗಳನ್ನು ಸೃಜನಾತ್ಮಕವಾಗಿ ಅಭಿವ್ಯಕ್ತಿಸುತ್ತದೆ. ಆದ್ದರಿಂದ ಕನಸು ಸಾಹಿತ್ಯಕ್ಕೆ ಮಾತ್ರವಲ್ಲದೇ ಬದುಕಿಗೂ ಸಹ ಹೊಸದೊಂದು ಪ್ರೇರಣೆಯನ್ನು ನೀಡುತ್ತದೆ ಎನ್ನುವುದು ಇದರಿಂದ ಸಾಬೀತಾಗುತ್ತದೆ.

ಸಾಹಿತ್ಯದ ಉಗಮದ ಪ್ರಕ್ರಿಯೆಗೆ ಹಲವುವೇಳೆ ಸುಪ್ತಮನಸಿನ ಅತೃಪ್ತ ಬಯಕೆಗಳೇ ಪ್ರೇರಣೆಯಾಗಬಹುದು ಎಂದು ಫ್ರಾಯ್ಡಾದಿಯಾಗಿ ಬಹುಪಾಲು ಮನಃಶಾಸ್ತ್ರಜ್ಞರು ಒಪ್ಪುತ್ತಾರೆ. ಅದರಂತೆ ಕನಸುಗಳಿಗೂ ಸಹ ಸುಪ್ತಮನಸಿನ ಅತೃಪ್ತ ಬಯಕೆಗಳೇ ಪ್ರೇರಣೆಗಳಾಗುತ್ತವೆ ಎಂದು ಅವರೇ ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಕನಸುಗಳಿಗಾಗಲೀ ಅಥವಾ ಕಾವ್ಯಗಳಿಗಾಗಲೀ

ಪ್ರೇರಣೆಗಳು ಒಂದೇ ಎಂದು ಇದರಿಂದ ಸಾಬೀತುಮಾಡಬಹುದು. ಅಂದರೆ ಸಾಹಿತ್ಯ ರಚನೆಗೊಳ್ಳುವುದು ಯಾವುದೋ ಒಂದು ಅಥವಾ ಹಲವು ಸಮಸ್ಯೆಗಳು ಇದೆ; ಅದಕ್ಕೊಂದು ಪರಿಹಾರದ ಅವಶ್ಯಕತೆಯಿದೆ ಎಂದು ಮನೋಭಿತ್ತಿಯಲ್ಲಿ ಘಟನೀಕರಿಸಿದಾಗ ಹೊರಹೊಮ್ಮುತ್ತದೆ ಎಂದಾಗುತ್ತದೆ. ಆದ್ದರಿಂದಲೇ ಸಾಹಿತಿ ತನ್ನ ಸಾಹಿತ್ಯದ ಮೂಲಕ ಆತ್ಮಾಭಿವ್ಯಕ್ತಿ ಮಾಡಿಕೊಳ್ಳುತ್ತಾನೆ. ಅದೇ ರೀತಿ ಕನಸುಗಳು ಅವನ ಆತ್ಮಾವಲೋಕನವನ್ನು ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತವೆ. ಇದರಿಂದಲೇ ತಿಳಿಯುತ್ತದೆ ಕನಸು ಮತ್ತು ಕಾವ್ಯಗಳು ಪರಸ್ಪರ ಹೇಗೆ ಪ್ರೇರಕ ಸಂಬಂಧವನ್ನು ಹೊಂದಿವೆ ಎಂಬುದು. ಆದ್ದರಿಂದ ಕನಸುಗಳು ಮತ್ತು ಕಾವ್ಯಗಳ ಸಹಾಯದಿಂದ ತನ್ನ ಅನುಭವಗಳನ್ನು, ನೋವು-ನಲಿವುಗಳನ್ನು ಇತರರೊಡನೆ ಹಂಚಿಕೊಳ್ಳುತ್ತಾನೆ ಎನ್ನುವ ಅಭಿಪ್ರಾಯವು ಇಂದು ಒಪ್ಪಿತಗೊಂಡಿದೆ. ಇದನ್ನೇ ಜಿ. ಎಸ್. ಶಿವರುದ್ರಪ್ಪನವರು 'ಮನಃಶಾಸ್ತ್ರದ ಕೀಲಿಕೈ' ಎಂಬ ಲೇಖನದಲ್ಲಿ "ಕಲೆ ಎನ್ನುವುದು ಕಲಾವಿದನ ಅಂತರಂಗದ ಸುಪ್ತಪ್ರಜ್ಞೆಯಲ್ಲಿ ನಡೆಯುವ ವ್ಯಾಪಾರ; ಮನಸು ಕಲಾಕೃತಿಯಲ್ಲಿ ತನ್ನನ್ನು ತಾನು ಪ್ರಸ್ಫುಟಗೊಳಿಸಿಕೊಳ್ಳುತ್ತದೆ; ಕಲಾಕೃತಿ ಮನಸಿನ ವಿಶೇಷ ವ್ಯಾಪಾರಗಳ ಪ್ರತಿನಿಧಿ; ಒಂದು ರೀತಿಯಲ್ಲಿ ಪ್ರತಿಮೆ; ಆದ್ದರಿಂದ ಅಲ್ಲಿ ಬೇರೆಲ್ಲಿಯೂ ದೊರೆಯದ ಅನೇಕ ರಹಸ್ಯ ಪ್ರಕಾರಗಳು ದೊರೆಯುತ್ತವೆ"[೩] ಎಂಬುದಾಗಿ ಸ್ಪಷ್ಟೀಕರಿಸಿದ್ದಾರೆ. ಇವರು ಹೇಳುವಹಾಗೆ ಒಂದು ಕಲಾಕೃತಿ ಮನಸಿನ ವಿಶೇಷ ವ್ಯಾಪಾರಗಳ ಪ್ರತಿನಿಧಿ ಅಥವಾ ಪ್ರತಿಮೆಯಾಗಿರುವಂತೆ ಕನಸುಗಳೂ ಸಹ ಮನಸಿನ ಇಂಥದ್ದೇ ವ್ಯಾಪಾರಗಳ ಪ್ರತಿನಿಧಿಗಳು ಅಥವಾ ಅದರ ರಹಸ್ಯ ಪ್ರತಿಮೆಗಳೇ ಅಗಿವೆ. ಆದ್ದರಿಂದ ಇವುಗಳ ನಡುವೆ ನಡೆಯುವ ಪ್ರೇರಣೆ-ಪ್ರಭಾವಗಳು ರಹಸ್ಯ ಮನಸ್ಥಿತಿಯ ಭಾಗವಾಗಿಯೇ ಇದ್ದು; ಕಾವ್ಯ ಬರಹದ ರೂಪದಲ್ಲಿ ಹಾಗೂ ಕನಸು ಅದರ ಸಾಧನಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಹೀಗಿರುವುದನ್ನು ಸಾಹಿತ್ಯದ ಕೆಲವು ನಿದರ್ಶನಗಳ ಮೂಲಕ ಕನಸಿನ ಪ್ರಭಾವ ಮತ್ತು ಪ್ರೇರಣೆಯನ್ನು ಗುರುತಿಸುವ ಕಾರ್ಯ ಈ ಮುಂದಿನದು.

ಸಾಹಿತ್ಯದ ದೃಷ್ಟಿಯಲ್ಲಿ ಕನಸಿನ ಪ್ರೇರಣೆಯು ಬಹುಮುಖ ವಿನ್ಯಾಸದ ಆಯಾಮಗಳನ್ನು ಹೊಂದಿರುವಂಥದ್ದು. ಯಾವೊಬ್ಬ ಸಾಹಿತಿಯೂ ಕನಸಿನ ರೂಪಗಳಿಂದ ದೂರ ಉಳಿಯಲಾರ ಎನ್ನುವಷ್ಟರಮಟ್ಟಿಗೆ ಕನಸಿನ ವ್ಯಾಪಕತೆ ಸಾಹಿತ್ಯದ ಬರಹಗಳ ಮೇಲೆ ತನ್ನ ಹಾಜರಿಯನ್ನು ಸ್ಪಷ್ಟಪಡಿಸುತ್ತದೆ. ಕವಿಗಳಂತೂ ಇಡಿಯಾಗಿ ಕನಸುಗಾರರೇ ಎಂದು ಸಂಬೋಧಿಸಲಾಗಿದೆ. ಅವರ ಕಾವ್ಯ ಅನುಭವ ಲೋಕಕ್ಕೊಡ್ಡಿದ ಕನಸಿನ ಚಿತ್ರರೂಪವಿದ್ದಹಾಗೆ ಎನ್ನಬಹುದೇನೋ?. ಪುರಾಣ ಪುಣ್ಯಕತೆಗಳಾಗಲೀ, ಮಹಾಕಾವ್ಯವಾಗಲೀ; ಕತೆ, ಕಾದಂಬರಿ, ನಾಟಕಗಳಾಗಲೀ, ಪ್ರವಾಸ ಸಾಹಿತ್ಯವೇ ಆಗಲೀ, ಜನ ಕಾವ್ಯ-ಕವನಗಳಾಗಲೀ ಅವುಗಳ ಆಂತರ್ಯದಲ್ಲಿ ತೀವ್ರತರದ ಭಾವಾವೇಶಗಳನ್ನು ತರುವ ಕನಸುಗಳು; ಸೃಜನಶೀಲ ಮನಸುಗಳ ಅರ್ಥಪೂರ್ಣ ಸಾಹಿತ್ಯ ಸೃಷ್ಟಿಗೂ ಪ್ರೇರಣೆ, ಸ್ಫೂರ್ತಿಯ ಚಿಲುಮೆಯಾಗಿ ಕಂಡುಬರುತ್ತದೆ.

ಕನಸನ್ನು ತರುವ ಪ್ರಬಲವಾದ ಸನ್ನಿವೇಶಗಳೆಂದರೆ, ಪೂರ್ವದ ಘಟನೆಗಳನ್ನು ಅಥವಾ ಸಂದರ್ಭಗಳನ್ನು, ನೆನಪುಗಳನ್ನು ಹೇಳುವ ಸಮಯ-ಸನ್ನಿವೇಶದಲ್ಲಿ. ಕತೆಯನ್ನು ಹೇಳುತ್ತಿರುವಾಗ ಯಾವುದೋ ಪ್ರಧಾನವಾದ ಸಂಭಾಷಣೆ ಅಥವಾ ಆಶಯ ಇಲ್ಲಿಯ ವಾಸ್ತವಕ್ಕೆ ಬೇಕಾಗಿದ್ದು, ಅದು ಹಿಂದೆ ಎಲ್ಲೋ ನಡೆದ ಅಥವಾ ಘಟಿಸಿದಹಾಗೆ ತೋರಿಸುವ ಸಲುವಾಗಿ ಕನಸನ್ನು ಸಾಕ್ಷಿ ರೂಪದಲ್ಲಿ ತರುವ ಮೂಲಕ ಅದನ್ನು ಸಮದೂಗಿಸುವುದು. ಸರಳವಾಗಿ ಹೇಳುವುದಾದರೆ ಹಿಂದೆ ನಡೆದು ಹೋದದ್ದನ್ನು ಈಗ ಹೇಳಲು ಕನಸನ್ನು ಬಳಸಿಕೊಳ್ಳುವುದು. ಅಂದರೆ ಸಾಹಿತ್ಯ ಅಥವಾ ಕಾವ್ಯಗಳಲ್ಲಿ ನೆನಪುಗಳನ್ನು ಹೇಳುವ ಸಲುವಾಗಿ ಕನಸುಗಳು ಅದರ ಪಾತ್ರವನ್ನು ನಿರ್ವಹಿಸುವ ಮೂಲಕ ಪ್ರೇರಣೆ ನೀಡುತ್ತವೆ. ಸಾಹಿತ್ಯದಲ್ಲಿ ಕನಸಿನ ಒಳಗೊಳ್ಳುವಿಕೆ ಹಲವಾರು ವಿನ್ಯಾಸಗಳಲ್ಲಿ ಆಗಿದ್ದರೂ; ಪ್ರಮಾಣದಿಂದಲೂ, ಬಳಕೆಯಿಂದಲೂ ನಿರೂಪಣಾ ತಂತ್ರವಾಗಿ ಕಾಣಿಸಿಕೊಂಡದ್ದೇ ಹೆಚ್ಚು. ಕನಸನ್ನು ತಮ್ಮ ಸೃಜನಾತ್ಮಕ ಪ್ರತಿಭೆಯ ಮೂಲಕ ತಮ್ಮ ಅನುಭವವನ್ನೋ, ಸನ್ನಿವೇಶಗಳನ್ನೋ, ಘಟನೆಗಳನ್ನೋ, ಬರಹದ ರೂಪದಲ್ಲಿ ನಿರೂಪಿಸಲು ಒಂದು ತಂತ್ರವಾಗಿ ಬಳಕೆಗೊಳ್ಳುವುದರ ಮೂಲಕವಾಗಿ ಪ್ರಭಾವಿಸುತ್ತದೆ. ಇದಕ್ಕೆ ಉದಾಹರಣೆಗಳು ಕತೆ ಮತ್ತು ಕಾದಂಬರಿಗಳಲ್ಲಿ ಹೆಚ್ಚಾಗಿ ಸಿಗುತ್ತವೆ. ಕಾರಂತರ 'ಮೈಮನಗಳ ಸುಳಿಯಲ್ಲಿ' ಮತ್ತು 'ಸ್ವಪ್ನದ ಹೊಳೆ', ದೇವನೂರು ಮಹದೇವರ 'ಕುಸುಮಬಾಲೆ', ಕುವೆಂಪುರವರ 'ಮಲೆಗಳಲ್ಲಿ ಮಧುಮಗಳು' ಮತ್ತು 'ಕಲ್ಕಿ'ಯಂತಹ ಕೆಲವು ಪದ್ಯಗಳು. ಹೀಗೆ ಇನ್ನು ಹಲವಾರನ್ನು ಉದಾಹರಿಸಬಹುದು. ಇಲ್ಲಿ ನಿರೂಪಣಾ ತಂತ್ರ ಎಂದರೆ ವಿವರಣೆ ಅಥವಾ ಹೇಳಿಕೆಯ ನೇಯ್ಗೆ ಅಥವಾ ಹೊದಿಕೆ ಎಂದಾಗುತ್ತದೆ. ಆದರೆ ತಂತ್ರ ಎನ್ನುವುದನ್ನು ಉಪಾಯದ ಒಂದು ಮಾರ್ಗವಾಗಿಯೂ ನೋಡಬೇಕಾದ ಸಾಧ್ಯತೆಯೂ ಇಲ್ಲದೆ. ಹಾಗಾಗಿಯೇ ಬರಹಗಾರ ಅಥವಾ ಸಾಹಿತಿಗೆ ಕನಸುಗಳು ಉಪಾಯದ ಸಾಧನಗಳಾಗಿ ಕಾಣುತ್ತವೆ ಎಂದೆನಿಸುತ್ತದೆ. ಈ ರೀತಿಯ ನಿರೂಪಣಾ ತಂತ್ರಗಾರಿಕೆ ಕಾರಂತರ ಬರಹಗಳುದ್ದಕ್ಕೂ ಕಾಣುತ್ತೇವೆ. ಅಲ್ಲದೇ ಕಾರಂತರೇ ಇದರ ಬಗ್ಗೆ ಬಹುವಾದ ಆಸಕ್ತಿಯನ್ನು ಹೊಂದಿದ್ದರು ಎನ್ನುವುದಕ್ಕೆ ಅವರ ಬರಹದಲ್ಲಿ ಕನಸಿನ ಬಗ್ಗೆ ನೀಡಿದ ವಿವರಣೆಗಳಿಂದ ತಿಳಿಯಬಹುದು.

ಸಾಹಿತ್ಯವನ್ನು ಇಡಿಯಾಗಿ ಅನುಭವದ ಅಭಿವ್ಯಕ್ತಿ ಎನ್ನುವ ಮಾತಿದೆ. ಇಂಥ ಅನುಭವೂಪೇತವಾದ ಸಾಹಿತ್ಯಿಕ ಅಭಿವ್ಯಕ್ತಿಯಲ್ಲಿ ಕನಸು ಅನುಭವ ದ್ರವ್ಯವಾಗಿಯೂ ಕಾಣಿಸಿಕೊಂಡಿದೆ. ಕನಸನ್ನು ಅಭಿವ್ಯಕ್ತಿ ಕೇಂದ್ರದಲ್ಲಿ ಇರಿಸಿದಾಗ ಅದು ಮಾಧ್ಯಮವಾಗಿ ನಿಲ್ಲುವಂತೆ; ಅದನ್ನು ಅನುಭವದ ಕೇಂದ್ರದಿಂದ ನೋಡಿದರೆ ಅದು ದ್ರವ್ಯವಾಗಿ ನಿಂತಿರುವುದು ಕಂಡುಬರುತ್ತದೆ. ಈ ಮಾದರಿಯ ಕನಸುಗಳನ್ನು ವಚನ ಸಾಹಿತ್ಯದಲ್ಲಿ ಹೆಚ್ಚಾಗಿ ಗುರುತಿಸಬಹುದು. ಸಾಹಿತಿಗಳು ತಮ್ಮ ಸೃಜನಶೀಲ ಪ್ರಕಾರಗಳಲ್ಲಿ ಔಚಿತ್ಯವರಿತು ಕನಸುಗಳಿಗೆ ಜಾಗ ಕಲ್ಪಿಸುತ್ತಾರೆ. ಅದು ಅವರ ಪ್ರತಿಭೆ ಮತ್ತು ಭಾವನಾಂತಿಕತೆಯ ಶಕ್ತಿಯನ್ನು ಅನುಸರಿಸಿರುತ್ತದೆ. 'ಸಾಹಿತ್ಯದ ಪರಿಣಾಮಕಾರಿ ತಲುಪಿಸುವಿಕೆಯು ಅಭಿವ್ಯಕ್ತಿಯ ಗುಣಮಟ್ಟವನ್ನು ಅವಲಂಬಿಸಿರುತ್ತದೆ'. ಇಂತಹ ಹಲವಾರು ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಕನಸು ಒಂದಾಗಿದೆ ಎಂಬುದು ಹಲವಾರು ಸಾಹಿತ್ಯಿಕ ಪಠ್ಯಗಳ ನಿದರ್ಶನಗಳಿಂದ ತಿಳಿಯಬಹುದು. ಜಿ. ಬಿ. ಜೋಶಿಯವರ 'ಜಡಭರತನ ಕನಸುಗಳು' ಇದಕ್ಕೆ ಬಹಳ ಸೂಕ್ತ ಉದಾಹರಣೆ. ಇಡೀ ಕೃತಿಯು ಕನಸಿನ ಪ್ರೇರಣೆ ಮತ್ತು ಪ್ರಭಾವದಿಂದಲೇ ನಿರ್ಮಾಣಗೊಂಡಿರುಂಥದ್ದು. ಇಲ್ಲಿ ಕನಸು ಕೇವಲ ಸಾಧನವೂ ಅಲ್ಲ, ಕೇವಲ ತಂತ್ರವೂ ಅಲ್ಲ, ಅದೇ ರೀತಿ ಕೇವಲ ಕಲಾಗಾರಿಕೆಯೂ ಅಲ್ಲ, ಹಾಗಾದರೆ ಏನು? ಎನ್ನುವ ಪ್ರಶ್ನೆಗೆ ಉತ್ತರ ಇವೆಲ್ಲವನ್ನೂ ಒಳಗೊಂಡಿರುವ ಒಂದು ಮಾಧ್ಯಮ. ಕನಸುಗಳನ್ನೇ ಇಡಿಯಾಗಿ ಸಾಹಿತ್ಯ ಕೃತಿಯಾಗಿಸಿದ ಕನ್ನಡದ ಏಕೈಕ ಕಲಾಕೃತಿ ಎಂಬ ಹೆಗ್ಗಳಿಕೆ ಇದರದ್ದು. ಕುರ್ತಕೋಟಿಯವರು ಇದನ್ನು "ಸ್ವಪ್ನ ಸಾಹಿತ್ಯದ ಒಂದೇ ಒಂದು ಮಾದರಿ"[೪] ಎಂದು ಕರೆಯುತ್ತಾರೆ. ಹಾಗಾದರೆ ಸಾಹಿತ್ಯದಲ್ಲಿ 'ಸ್ವಪ್ನಸಾಹಿತ್ಯ' ಎನ್ನುವುದೊಂದಿದೆಯೇ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ 'ಜಡಭರತನ ಕನಸುಗಳು' ಉತ್ತರವಾದರೂ ಅದು ಮತ್ತೆಲ್ಲೂ ಕಾಣಸಿಗುವುದಿಲ್ಲ, ಆದ್ದರಿಂದಲೇ ಅಂಥದೊಂದು ಪ್ರಕಾರವಾಗಲು ಸಾಧ್ಯವಾಗಿಲ್ಲ ಎಂದೆನಿಸುತ್ತದೆ.

ಜಡಭರತರು ಅವರ 'ಜಡಭರತನ ಕನಸುಗಳು' ಎಂಬ ಕೃತಿಯಲ್ಲಿ ತಮ್ಮ ಕನಸನ್ನು ಹೇಳಲು ಸಾಹಿತ್ಯವನ್ನು ಬಳಸಿದರೂ ಅಥವಾ ತಮ್ಮ ಸೃಜನಾತ್ಮಕ ಸಾಹಿತ್ಯವನ್ನು ಹೊರಹಾಕಲು ಕನಸನ್ನು ಬಳಸಿಕೊಂಡರೋ; ಆದರೆ ಇದರ ದ್ರವ್ಯವಂತು ಕನಸೇ ಆಗಿರುವುದು ಸ್ಪಷ್ಟ. ಇದನ್ನು ಬೇಂದ್ರೆ "ಇವು ಹೇಳೀಕೇಳಿ ಕನಸುಗಳು. ಎಂದರೆ ದ್ರವ್ಯ ನಿಜವಾದ ಕನಸಿನದ್ದು. ಪಾಕ ಸಾಹಿತ್ಯದ್ದು. ಅವುಗಳ ಮೂಲಕ್ರಮ ಏನೇ ಇದ್ದರೂ ಅವುಗಳನ್ನು ಹೊಂದಿಸಿದ ಅನುಕ್ರಮಣದಿಂದ ಕನಸುಗಳಿಗೆ ಒಡಗತೆಯ ರೂಪ ಬಂದಿದೆ. ಇದೊಂದು ಆದರ್ಶವಾದಿಯ ಮನೋರಾಜ್ಯದ ಒಂದು ರೂಪಕ ಎಂದರೂ ಸಲ್ಲುವುದು"[೫] ಎಂದು ಇದನ್ನು ತೀರಾ ವಿವೇಚನಾಯುತವಾಗಿ ವಿವರಿಸುತ್ತಾರೆ. ಮತ್ತು ಕುರ್ತಕೋಟಿಯವರು ಸಹ "ಜಡಭರತರ ಕನಸುಗಳು, ಕನ್ನಡದಲ್ಲಿ ತೀರಾ ಅಪೂರ್ವವಾದ ಗ್ರಂಥವಾಗಿದೆ. ಏ. ಇ. ಯೇಟ್ಸ್ ಮೊದಲಾದವರ ಕೃತಿಗಳಿಗೆ ಅದು ಸರಿಸಮನಾಗಿದೆ. ಅದರ ಮೂಲ ದ್ರವ್ಯ ಅಥವಾ ಒಳಮ್ಮೆ ಕನಸಿನದಾಗಿದ್ದರೂ, ಅದರ ಅಭಿವ್ಯಕ್ತಿ ಕಲಾತ್ಮಕವಾಗಿಯೇ ಇದೆ"[೬] ಎಂದು ಹೇಳಿದ್ದಾರೆ. ಇಲ್ಲಿ ಗುರುತಿಸಬೇಕಾದ ಮತ್ತೊಂದು ಅಂಶವೆಂದರೆ ಕನಸುಗಳೂ ಸಹ ಕಲಾತ್ಮಕವಾದ ಸಾಧನೆಗಳೇ ಎಂಬುದು. ಅವು ಮನಸಿನ ಕಲಾತ್ಮಕ ಅಭಿವ್ಯಕ್ತಿಗಳು.

ಕನಸೆನ್ನುವ ನಿಜವಾದ ಅರ್ಥನಿರೂಪಣೆ ಇದರ ಮೇಲೆಯೇ ನಿಂತಿದೆ ಎಂಬುದು ಇಲ್ಲಿಯ ಅಭಿಪ್ರಾಯ. ಅದಕ್ಕೆ ಕಾರಣ ನಮ್ಮ ಸಾಹಿತ್ಯಿಕ ಅಭಿವ್ಯಕ್ತಿ ಬದುಕಿನ ಕುತೂಹಲಗಳ ಮತ್ತು ಬಯಕೆ–ಬೇಡಿಕೆಗಳ ಹಾಗೂ ಆಸೆ–ಆಕಾಂಕ್ಷೆಗಳ ಕಟ್ಟು ಆಗಿರುವುದು. ಈ ರೀತಿಯ ಕನಸಿನ ವಿನ್ಯಾಸಗಳು ಹಚ್ಚಾಗಿ ಪ್ರೀತಿ, ಪ್ರೇಮ, ಪ್ರಣಯ ಮತ್ತು ಬಹುಕಾಲದ ತೀವ್ರತರ ಬಯಕೆ ಹಾಗೂ ಭವಿಷ್ಯದ ಬಗೆಗಿನ ಅತೀಯಾದ ನಿರೀಕ್ಷೆಯಂತಹ ಸಂದರ್ಭಗಳಲ್ಲಿ ಕಂಡುಬರುತ್ತವೆ. ಇವುಗಳು ಮಾನವನ ಬದುಕಿನ ಆಶಾವಾದದ ಸೆಲೆಗಳಂತೆ, ಜೀವಿತದ ಅವಧಿಯ ಸಂಜೀವಿನಿ ನದಿಯಂತೆ; ಸದಾ ಕ್ರಿಯಾಶೀಲ ಗುಣದ ಚಹರೆಯಿಂದ ಕೂಡಿರುತ್ತವೆ. ಇಂತಹ ಕನಸುಗಳಿಗೆ ಸಾಹಿತ್ಯದಲ್ಲಿ ಹಲವಾರು ಉದಾಹರಣೆಗಳು ಸಿಗುತ್ತವೆ. ಆಂಡಯ್ಯನ 'ಕಬ್ಬಿಗರ ಕಾವ'ದಲ್ಲಿ 'ನೆನೆಯನು ಕಾಣುವ ಮನೋಹರವಾದ ಹೆಣ್ಣೊಬ್ಬಳ ರೂಪ ಲಾವಣ್ಯ ಮತ್ತು ಸೌಂದರ್ಯಯುತ ಪ್ರೀತಿಯ ನೋಟ'.[೭] ಇದನ್ನು ನಗೆಗಾರ "ಈ ಕನಸು ಸತ್ಯವಾದುದು ಕೇಳು, ನಿನಗೆ ಬೇಗನೆ ಒಬ್ಬ ಚಲುವೆ ದೊರಕುವಳು"[೮] ಎಂದು ಅವನಿಗೆ ಸಿಗುವ ಸುಂದರ ರಾಣಿಯ ಸೂಚನೆ ಎಂದು ವಿಶ್ಲೇಷಿಸುತ್ತಾನೆ. ಇಲ್ಲಿ ಕನಸು ಭವಿಷ್ಯದಲ್ಲಿ ಸತ್ಯವಾಗುತ್ತದೆಂಬುದು ಅದು ಇಲ್ಲಿ ಗೌಣ; 'ನೆನೆಯ'ನ ಅಂತರಂಗದ ಉತ್ಕಟವಾದ ಹೆಣ್ಣಿನ ಬಯಕೆಯೇ ಪ್ರಧಾನ. ಹಾಗಾಗಿ ಕನಸುಗಳು ಕಾವ್ಯದಲ್ಲಿ ಭವಿಷ್ಯವನ್ನು ಪ್ರೇರೇಪಿಸುವ ಕಾರ್ಯವನ್ನು ಮಾಡುತ್ತವೆ.

ಹಗಲುಗನಸುಗಳೆಲ್ಲ ಇದೇ ಮಾದರಿಗೆ ಸೇರುವಂಥವುಗಳಾಗಿವೆ. ಆದರೆ ಇಲ್ಲಿಯ ಬಯಕೆಗಳು ನಾವು ರಾತ್ರಿ ನಿದ್ರೆಮಾಡುವಾಗ ಕಂಡಂತವುಗಳಲ್ಲ. ಬದಲಿಗೆ ನಾವು ಎಚ್ಚರಿದ್ದುಕೊಂಡೇ ಕಲ್ಪಿಸಿಕೊಂಡಂಥವು ಅಥವಾ ಹಗಲಿನ ವಿಶ್ರಾಂತ ಸ್ಥಿತಿಯಲ್ಲಿ ಮನಸಿನ ಆಂತರ್ಯದಲ್ಲಿ ತಾತ್ಕಾಲಿಕ ಅಥವಾ ತುರ್ತಿನ ಬಯಕೆಗಳನ್ನು, ಆಸೆ–ಆಕಾಂಕ್ಷೆಗಳನ್ನು ಪೂರೈಸಿಕೊಂಡಂತೆ ಭಾಸವಾದಂಥವು. ಇನ್ನೊಂದರ್ಥದಲ್ಲಿ ಹಗಲುಗನಸುಗಳೆಂದರೆ ನಮ್ಮ ಸಾಮರ್ಥ್ಯ, ಸಾಧ್ಯತೆಗಳನ್ನು ಮೀರಿದ, ವಾಸ್ತವದಲ್ಲಿ ಅವು ಜರುಗಲಸಾಧ್ಯವಾದ, ಕೈಲಾಗದ ಖಾಲೀ ಆಸೆಗಳು ಎಂಬ ಅರ್ಥವೂ ಇದೆ. ಅದರೆ ಸಾಹಿತ್ಯದ ದೃಷ್ಟಿಯಿಂದ ಹಗಲುಗನಸುಗಳು ಬೇರೆಯಲ್ಲ ಕಾವ್ಯ ಬೇರೆಯಲ್ಲ ಎನ್ನುವ ಅರ್ಥದಲ್ಲಿಯೇ ನೋಡಬೇಕಾಗುತ್ತದೆ. ಇಷ್ಟೇ ಅಲ್ಲದೇ ಮಹಾಕಾವ್ಯಗಳಲ್ಲಿ, ಪುರಾಣಗಳಲ್ಲಿ, ಮಹಾಪುರುಷರ ಜನ್ಮವೃತ್ತಾಂತಗಳ ನಿರೂಪಣೆಯಲ್ಲಿ, ಪುಣ್ಯಕತೆಗಳಲ್ಲಿ, ಜನಪದ ಮಹಾಕಾವ್ಯಗಳಲ್ಲಿ ಹಚ್ಚಾಗಿ ಕಾಣಸಿಗುತ್ತವೆ. ಇಲ್ಲಿ ಕನಸಿನ ಉದ್ದೇಶಗಳು ಕತೆಯ ಮುಂದಿನ ಸೂಚನೆ ಮತ್ತು ಆ ಪಾತ್ರದ ಮುಂದಿನ ಪಾತ್ರಾಭಿನಯ ಹಾಗೂ ಕವಿಯ ಕೇಂದ್ರ ವಸ್ತುವಿನ ಆಶಯದ ರೀತಿಯಲ್ಲಿಯೇ ಘಟನೀಕರಿಸಲು ಇತ್ಯಾದಿಯಾಗಿ ಕಾಣಬಹುದು. ಅಂತಹ ಕೆಲವನ್ನು ಉದಾಹರಿಸುವುದಾದರೆ ರಾಮಾಯಣ, ಮಹಾಭಾರತ ಕನಸಿನ ಚಿತ್ರಣಗಳು. ಶನಿಪುರಾಣ, ಜೈನಪುರಾಣಗಳಲ್ಲಿ ಮತ್ತು ಬುದ್ಧ, ಮಹಾವೀರ, ಕೃಷ್ಣ, ಮುಂತಾದವರ ಜನ್ಮಪೂರ್ವ ಸನ್ನಿವೇಗಳಲ್ಲಿ ಮುಂತಾದುವುಗಳಲ್ಲಿ ಗುರುತಿಸಬಹುದು. ರಾಮಾಯಣದ ಒಂದು ಸನ್ನಿವೇಶವನ್ನು ಉದಾಹರಿಸುವುದಾದರೆ– ದಶರಥ ಸಾಯುವ ಸ್ಥಿತಿಯಲ್ಲಿದ್ದಾಗ ದೂರದಲ್ಲಿದ್ದ ಭರತ ಮತ್ತು ಶತೃಘ್ನರಿಗೆ ಒಂದು ಕನಸು ಬೀಳುತ್ತದೆ; 'ಅದರಲ್ಲಿ ತನ್ನ ತಂದೆ ಸತ್ತಂತೆ ಭಾಸವಾಗುತ್ತದೆ'. ಇದನ್ನು ಅವರು ಬೆಳಗ್ಗೆ ಎದ್ದು ಒಬ್ಬರಿಗೊಬ್ಬರು ಹಂಚಿಕೊಂಡು, ಈ ಅನರ್ಥದ ಪರಿಹಾರವಾಗಿ ದಾನವನ್ನು ಕೊಡುತ್ತಿರುವಾಗ ಅವರ ತಂದೆಯ ಸಾವಿನ ಸುದ್ದಿ ಬಂದು ಮುಟ್ಟುತ್ತದೆ. ಇಲ್ಲಿ ಕನಸು ಕಥಾ ಸಂವಿಧಾನದ ಬೆಳವಣಿಗೆಯನ್ನು ಪ್ರೇರೇಪಿಸುತ್ತದೆ.

ಕನಸನ್ನು ಸೃಜನಶೀಲ ಮನಸಿನ ಉತ್ಪಾದಕ ಕಲೆಗಳು ಎನ್ನಬಹುದು. ಆದ್ದರಿಂದಲೇ ಪುಣೆಕರ್‌ರವರು "ಮೂಲ ಸೃಜನಕ್ರಿಯೆಯಾಗಿ ಕಾಮ, ಕನಸು"[೯] ಎಂದು ಹೇಳುತ್ತಾರೆ. ಸಾಹಿತ್ಯದಮಟ್ಟಿಗೆ ಕನಸು ಕಲಾಗಾರಿಕೆಯ ಅತ್ಯಮೂಲ್ಯ ವಸ್ತು. ಅದು ನೀಡಿರುವ ಅಪೂರ್ವ ಸೃಷ್ಟಿ ವೈಚಿತ್ರ್ಯಗಳು ಪ್ರತಿಯೊಬ್ಬ ಸಾಹಿತಿಯ ಸಹಜತಮ ಸುಂದರ ಕಲಾನೈಪುಣ್ಯಗಳು ಮತ್ತು ಭಾವನಾಭಿವ್ಯಕ್ತಿಯ ಮರೀಚಿಕೆಗಳು. ಕನಸಿನ ಈ ಕಲಾವಿನ್ಯಾಸದ ರೂಪಗಳು ಕವಿಗಳ ಕಾವ್ಯಜಗತ್ತಿನಲ್ಲಿ ಮನೋಹರವಾಗಿ ಅಭಿವ್ಯಕ್ತಗೊಂಡಿವೆ. ಕೆ.ಎಸ್. ನರಸಿಂಹಸ್ವಾಮಿಯ ಕಾವ್ಯದ ಒಳಮ್ಮೆಯಲ್ಲಿ ಇಂಥದೊಂದು ಅನುಭವ ಅಧಿಕವಾಗಿ ಕಾಣುತ್ತದೆ. ಕಾವ್ಯವನ್ನು ಒಂದು ಕಲೆ ಎಂದು ಪರಿಗಣಿಸುವುದಾದರೆ; ಅದರ ಒಳಭಿತ್ತಿಯಲ್ಲಿ ಮೈದಳೆಯುವ ಕನಸುಗಳು ಸಹ ಉಳಿದೆಲ್ಲ ಪರಿಕರಗಳಿಗಿಂತ ಹೆಚ್ಚು ಕಲಾಚೈತನ್ಯಗಳಾಗಿ ಕಂಡುಬರುತ್ತವೆ. ಅನುಭಾವದ ಸಂಸರ್ಗವನ್ನು ಹೊಂದಿರುವ ಕವಿಗಳಂತೂ ಕನಸನ್ನು ತಮ್ಮ ಕಾವ್ಯದ ಮೂಲ ಸ್ಥಿತಿಯಂತೆ ಕಂಡಿದ್ದಾರೆ. (ಮಧುರಚೆನ್ನ, 'ನನ್ನ ನಲ್ಲ' ಇದಕ್ಕೆ ಸೂಕ್ತ ನಿದರ್ಶನ) ಕಾರಣ ಪರಿಣಾಮಗಳ ತೀವ್ರತೆಯನ್ನು ಧಿಕ್ಕರಿಸುವ ಕನಸುಗಳು ಹೊರಡಿಸುವ ಅನುಭವಗಮ್ಯತೆ ವಾಸ್ತವ ಬದುಕಿನಲ್ಲಿ ಆಜೀವ ರಹಸ್ಯವಾಗಿಯೇ ಉಳಿದುಬಿಡುತ್ತವೆ. ಆದ್ದರಿಂದಲೇ ಕನಸುಗಳು ಕಲಾಪ್ರತಿಮೆಗಳಾಗಿ ಉಳಿಯತ್ತವೆಯೇ ಹೊರತು ಕಲಾಕೃತಿಗಳಾಗಿ ಅಲ್ಲ ಎಂದೆನಿಸುತ್ತದೆ ಆದರೂ ಅದು ಮನಸಿನ ಒಂದು ಕಲಾಕೃತಿಯೇ ಎಂದು ಹೇಳಬೇಕಾಗುತ್ತದೆ.

ನಮ್ಮ ಜೀವನದ ಪ್ರಾಪಂಚಿಕ ಸುಖದ ಅನುಭಗಳಲ್ಲಿ ಕನಸನ್ನಿಟ್ಟು ನೋಡುವುದಾದರೆ; ಅದು ನಮ್ಮ ಮೂಲಭೂತ ಬಯಕೆ–ಬೇಡಿಕೆ, ಅಸೆ–ಅವಶ್ಯಕತೆಗಳಿಗಿಂತ ಬೇರೆಯಾಗಿ ಕಾಣುವುದಿಲ್ಲ. ಕನಸೂ ಸಹ ಒಂದು ಮೂಲಭೂತ ಅವಶ್ಯಕತೆಗಳಲ್ಲೊಂದು ಎನ್ನುವುದು ಮನೋವಿಜ್ಞಾನದ ನಂಬಿಕೆ. ಪ್ರಾಪಂಚಿಕದ ಎಲ್ಲ ಅನುಭವಗಳನ್ನು ನಟನೆ ಮಾಡಿತೋರಿಸುವಂತೆ ಕಾಣುವ ಕನಸುಗಳನ್ನು ಒಂದು ಕಲೆ ಎಂದು ಕರೆಯದೆ ಮತ್ತೇನೆಂದು ಕರೆಯುವುದು?. ಭಾರತೀಯ ತತ್ವಶಾಸ್ತ್ರವೂ ಸಹ ಸ್ವಪ್ನಾನುಭವ ಸ್ಥಿತಿಯನ್ನು ಸುಂದರ ಮತ್ತು ಮನೋಹರ ಎಂದು ಪರಿಗಣಿಸಿದಂತೆ ಕಾಣುತ್ತದೆ. ಏಕೆಂದರೆ ಅದು ಪಾಶ್ಚಾತ್ಯ ಮನೋವಿಜ್ಞಾನಿಗಳಂತೆ ಲೈಂಗಿಕ ಪ್ರೇರಕವಾಗಿಯೋ ಅಥವಾ ಪಾಶವೀ ಪ್ರವೃತ್ತಿಗಳ ಉಗ್ರಾಣವೆಂದಾಗಿಯೋ ಅಥವಾ ಸಾಮಾಜಿಕ ವಿರೋಧಿ ಬಯಕೆಗಳ ಈಡೇರಿಕೆಗಳೆಂದಾಗಿಯೋ ಕನಸನ್ನು ಕಾಣುವುದಿಲ್ಲ. ಅದರ ಬದಲಾಗಿ ಸೃಜನಶೀಲ ಮನಸಿನ

ಸೃಜನಶೀಲ ಕಲೆಗಳಾಗಿ; ಕ್ರಿಯಾಶೀಲ ಮನಸಿನ ಕ್ರಿಯಾಶೀಲ ಅಭಿವ್ಯಕ್ತಿಯಾಗಿ ಕಂಡಿದೆ.

ಸುಪ್ತಚೇತನ ಮಾನವನ ಅತೃಪ್ತ ಆಕಾಂಕ್ಷೆಗಳ ಆಗರ. ಮಾನವನ ಮನಸಿನಲ್ಲಿ ಚೇತನಾಂಶ ಒಂದಾದರೆ ಸುಪ್ತಚೇತನ ಒಂಬತ್ತರಷ್ಟು. ಸುಪ್ತಚೇತನ ವಿಶಾಲವಾಗಿರುವಷ್ಟೇ ಪ್ರಭಾವಪೂರ್ಣವೂ ಕೂಡ. ವರ್ತನೆಯ ಬಹುತ್ವಾಂಶವು ಸುಪ್ತಚೇತನದಿಂದ ನಿರ್ಧರಿತವಾಗಿರುತ್ತದೆ. "ಹಲವು ವೇಳೆ ಸುಪ್ತಮನಸಿನ ಅತೃಪ್ತಬಯಕೆಗಳೇ ಸಾಹಿತ್ಯ ರಚನೆಗೆ ಪ್ರೇರಣೆಯಾಗಬಹುದು"[೧೦] ಎಂಬುದು ಫ್ರಾಯ್ಡ್‌ನ ಅಭಿಮತ. ಏಕೆಂದರೆ ಅವನೇ ಹೇಳುವಂತೆ ಸುಸಂಸ್ಕೃತ ಸಮಾಜದಲ್ಲಿ ತೃಪ್ತಿಗೊಳಿಸಲಾಗದ ಮತ್ತು ತೃಪ್ತಿಗೊಳಿಸಬಾರದ ಹಾಗೂ ಅನೈತಿಕವಾದ ಬಯಕೆಗಳು ಶೈಶವದಲ್ಲಿಯೇ ಸುಪ್ತಚೇತನಕ್ಕೆ ತಳ್ಳಲ್ಪಟ್ಟಿರುತ್ತವೆ. ಹೀಗೆ ತಳ್ಳಲ್ಪಟ್ಟ ಬಯಕೆಗಳು ಅಲ್ಲಿ ಶಕ್ತಿಯುತವಾಯೇ ಉಳಿದಿದ್ದು, ಹೊರಬರಲು ಅವಕಾಶವನ್ನು ನಿರೀಕ್ಷಿಸುತ್ತಿರುತ್ತವೆ ಎನ್ನುವುದು. ಈ ನಿರೀಕ್ಷೆಯ ಫಲವಾಗಿ ಅವನ ಸೃಜನಶೀಲ ಮಾನಸಿಕ ಅನಿಯಮಿತ ಅನುಭವಗಳು ತನ್ನ ಸೃಜನಶೀಲ ಬರಹದಲ್ಲಿ ಹೊರಹಾಕಲ್ಪಡುತ್ತವೆ. ಆದ್ದರಿಂದಲೇ ಫ್ರಾಯ್ಡ್ "ಸಾಹಿತಿಗಳನ್ನು ಅನಧಿಕೃತ ಮನೋವಿಜ್ಞಾನಿಗಳು"[೧೧] ಎಂದು ಭಾವಿಸುತ್ತಾನೆ. ಸಾಹಿತಿಯು ತಾನು ಶ್ರಮವಹಿಸಿ ಕಂಡುಕೊಂಡ ವೈಜ್ಞಾನಿಕ ಸತ್ಯಗಳನ್ನು ಒಂದೊಂದು ವೇಳೆ ಬಹಳ ಸಹಜವಾಗಿ, ಸುಲಭವಾಗಿ, ತಮಗರಿವಿಲ್ಲದಂತೆ ನಿರೂಪಿಸಿದ್ದಾರೆಂಬುದು ಅವನ ಸ್ಪಷ್ಟವಾದ ನಂಬಿಕೆ. ಆದ್ದರಿಂದ ಕಾವ್ಯವನ್ನು ಸಾಹಿತ್ಯವಾಗಿಯಲ್ಲದೇ ಮನೋವಿಶ್ಲೇಷಣೆಯ ನಿರೂಪಣೆಯೆಂದೂ ಮತ್ತು ಕನಸುಗಳನ್ನು ಕೇವಲ ಮನೋವಿಜ್ಞಾನದ ವಸ್ತುವಾಗಿಯಲ್ಲದೇ ಸಾಹಿತ್ಯದ ಪ್ರೇರಕ ಸಾಧನ ಎಂದೂ ನಾವು ಕರೆಯಬಹುದು. ಹಾಗಾಗಿ ಕನಸುಗಳಿಂದ ಕವಿಯ ವ್ಯಕ್ತಿತ್ವವನ್ನು ತಿಳಿಯಲು ಸಾಧ್ಯವಿದೆ ಮತ್ತು ಕಾವ್ಯದಿಂದ ಕವಿಯ ಕನಸುಗಾರಿಕೆಯನ್ನು ಗುರುತಿಸಲು ಸಾಧ್ಯವಿದೆ ಎಂದೆನಿಸುತ್ತದೆ.

ಪ್ರತಿಯೊಂದು ಸಾಹಿತ್ಯ ಕೃತಿಗಳು ಅಥವಾ ಯಾವುದೇ ಕೃತಿಗಳು ಮನೋ ಆವರಣದ ವಸ್ತುಗಳೇ ಆದರೂ ಎಲ್ಲವನ್ನು ನಾವು ಮನೋವೈಜ್ಞಾನಿಕ ಅಥವಾ ಮನೋವಿಶ್ಲೇಣಾತ್ಮಕ ಕೃತಿಗಳು ಎಂದು ಕರೆಯಲು ಸಾಧ್ಯವಿಲ್ಲ ಎನ್ನುವುದು ಸತ್ಯವಷ್ಟೆ. ಆದರೆ ಇಂಥದೊಂದು ಆಲೋಚನೆ ಬಂದಿರುವುದು ತಪ್ಪಲ್ಲವೆನಿಸುತ್ತದೆ. ಇದಕ್ಕೆ ಕಾರಣಗಳನ್ನು ಈ ಹಿಂದೆಯೇ ಚರ್ಚಿಸಿದೆ. ಈ ಹಿನ್ನೆಲೆಯಲ್ಲಿ ಮನೋವಿಜ್ಞಾನದ ದೃಷ್ಟಿಯಿಂದ ಒಂದು ಸಾಹಿತ್ಯ ಕೃತಿಯು ಏಕಕಾಲಕ್ಕೆ ಒಂದು ವಸ್ತುವೂ ಹೌದು, ಒಂದು ಮನೋನಿರ್ಮಿತಿಯೂ ಹೌದು. ಈ ದೃಷ್ಟಿಯಿಂದ ಕವಿ ಮತ್ತು ಕಲಾಕೃತಿಗೆ ಸಂಬಂಧಿಸಿದಂತೆ ಮನೋವಿಜ್ಞಾನವಿರಲಿ; ಸಾಹಿತ್ಯ ವಿಮರ್ಶಕರೇ ಆಗಲಿ ಕವಿ ಅಥವಾ ಕಲಾವಿದನ ಜೀವನ–ವ್ಯಕ್ತಿತ್ವದ ಮೂಲಕ ಕಾವ್ಯ–ಕಲೆಯನ್ನು, ಕಲಾಕೃತಿಯ ಬಾಹ್ಯ ಮತ್ತು ಆಂತರಿಕ ಸಾಕ್ಷಿಗಳ ಮೂಲಕ ಕವಿ ಅಥವಾ ಕಲಾವಿದನನ್ನು ಕುರಿತು ಊಹಿಸಬಹುದೇ ಹೊರತು ಖಚಿತವಾಗಿ ಇದಮಿತ್ಥಂ ಎಂದು ತೀರ್ಮಾನಿಸುವುದು ಸಾಧ್ಯವಾಗಲಾರದು. ಈ ಮಾತಿಗೆ ಸಾಕ್ಷಿಯಾಗಿ ಕೆ. ವಿ. ತಿರುಮಲೇಶ್ ಹೇಳುವ "ಒಬ್ಬ ಲೇಖಕನ ವೈಯಕ್ತಿಕ ಬದುಕು ಅವನ ಬರಹಗಳ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಿರುತ್ತದೆ ಎನ್ನುವುದನ್ನು ಯಾರೂ ನಿಖರವಾಗಿ ಅಳೆಯಲಾರು. ಆದರೆ ಇಬ್ಸನ್ ಹೇಳುವಂತೆ ಯಾವ ಲೇಖಕನೂ ತಾನು ಚಿತ್ರಿಸುವ ಪಾತ್ರಗಳಿಂದ ತನ್ನದೇ ಅಂಶಗಳನ್ನು ದೂರವಿಡುವುದು ಸಾಧ್ಯವಿಲ್ಲ."[೧೨] ಈ ವ್ಯತಿರಿಕ್ತವಾದ ಆಲೋಚನೆಗಳನ್ನು ಕೊಡಬಹುದು. ಇಲ್ಲಿಯ ಅರ್ಥವಿಷ್ಟೇ, ಬರಹಗಾರನ ವ್ಯಕ್ತಿತ್ವ ಮತ್ತು ಅವನ ಕಲಾಕೃತಿ ಒಂದನ್ನೊಂದು ಅವಲಂಬಿಸಿರುವಂತವೇನೋ ಸರಿ. ಆದರೆ ಈ ಅವಲಂಬನೆಯನ್ನು ಹೀಗೇ ಎಂದು ಹೇಳುವುದು ಯಾವ ಜ್ಞಾನಶಿಸ್ತಿನಿಂದಲೂ ಆಗದು.

ಅದರಂತೆಯೇ ಕನಸುಗಳು ಮತ್ತು ಕಾವ್ಯಗಳು ಮನಸಿನ ಒಳ ರಹಸ್ಯಗಳ ನಿರ್ಮಿತಿಗಳೇ ಆಗಿರುವುದರಿಂದ ಇವುಗಳನ್ನು ಪ್ರಭಾವಿಸುವ ಅಂಶಗಳು ಇವುಗಳೇ ಎಂದು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ ಎನಿಸುತ್ತದೆ. ಒಟ್ಟಂದದಲ್ಲಿ ಕನಸುಗಳು ಮತ್ತು ಕಾವ್ಯಗಳು ತಮ್ಮ ಒಳ ರಚನೆಗಳಲ್ಲಿ ಮತ್ತು ಮನೋನಿರ್ಮಿತಿಯ ದೃಷ್ಟಿಯಲ್ಲಿ ಸಾಕಷ್ಟು ಸಾಮ್ಯತೆಯ ಅಥವಾ ಸಮಾನಾಂಶಯುಕ್ತ ಪ್ರೇರಣೆ–ಪ್ರಭಾವಗಳನ್ನು ಹೊಂದಿವೆ ಎಂಬುದನ್ನು ಈ ಲೇಖನವು ಸಾಧಿಸುತ್ತದೆ. ಅಲ್ಲದೇ ಇವುಗಳು ಸ್ವ–ಪ್ರೇರಕ ಸಂಬಂಧಗಳನ್ನು ಹೊಂದಿವೆ ಎಂದು ನಿರೂಪಿಸುತ್ತದೆ.

### ಉದ್ಧರಿತ ಟಿಪ್ಪಣಿಗಳು


1. ಎಂ. ಪ್ರಭಾಕರ: ಪಶ್ಚಿಮದ ಬೆಳಕು, ಪುಟ– ೩೮–೩೯.
2. (ಪಶ್ಚಿಮದ ಬೆಳಕು. ಮೂಲ ವಿಲ್ ಡುರಾಂಟ್. ಅನುವಾದ ಎಂ ಪ್ರಭಾಕರ. ಪ್ರಕಾಶನ ಆನಂದ ಕಂದ ಗ್ರಂಥಮಾಲೆ
3. ಮಲ್ಲಾಡಿಹಳ್ಳಿ ೨೦೦೩.)
4. ಅ ಉ ಎಣಾಟಿರ: ಠಿಥಿಛ್ಞಿಠಟಠಠಥಿ ಚಿಟಿಜ ಟುಣಜಡಿಚಿಣಣಡಿಜ, ಪುಟ– ೧೮೪.
5. (ಈಡಿಠಟ– ೨೦ಣ್ಣ ಛಿಜಟಿಣಣಡಿಥಿ ಟುಣಜಡಿಚಿಡಿಥಿ ಛಿಡಿಣಚಿಛ್ಞಿಟ, ಇಜ– ಆಚಿತುಜ ಟಠಜರಜ, ಖಟಿರಟಚಿಟಿಟಿ ಔಣಾಛಟುಛಿಚಿಣುಠಟಿ.)
6. ಜಿ. ಎಸ್. ಶಿವರುದ್ರಪ್ಪ: ವಿಮರ್ಶೆಯ ಪೂರ್ವ–ಪಶ್ಚಿಮ, ಪುಟ– ೭೧.
7. (ಜಿ. ಎಸ್. ಶಿವರುದ್ರಪ್ಪ ವಿಮರ್ಶೆಯ ಪೂರ್ವ–ಪಶ್ಚಿಮ ಸಾಹಿತ್ಯ ಭಂಡಾರ ಪ್ರಕಾಶನ ೧೯೬೬.)
8. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪುಟ ೨೫೭
9. (ಕೀರ್ತಿನಾಥ ಕುರ್ತಕೋಟಿ: ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ ೧೯೬೨)
10. ಜಡಭರತ: ಜಡಭರತನ ಕನಸುಗಳು, ಮುನ್ನುಡಿ ಭಾಗ.
11. (ಜಡಭರತ: ಜಡಭರತನ ಕಸುಗಳು, ಮನೋಹರ ಗ್ರಂಥ ಮಾಲಾ, ಧಾರವಾಡ ೧೯೯೭.)
12. ಕೀರ್ತಿನಾಥ ಕುರ್ತಕೋಟಿ: ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪುಟ ೨೫೮.
13. ಕಬ್ಬಿಗರ ಕಾವಂ, ಪುಟ ೯೪ ರಿಂದ ೯೬ – ಪದ್ಯ ೫೯ ರಿಂದ ೬೫
14. (ದೇಜಗೌ: ಸಂಪಾದಿತ– ಕಬ್ಬಿಗರ ಕಾವಂ, ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ ೧೯೯೯)
15. ಅದೇ ಪದ್ಯ ೬೬.
16. ಶಂಕರ್ ಮೊಕಾಶಿ ಪುಣೇಕರ್ ಸಮಗ್ರ ಸಾಹಿತ್ಯ ೨, ಪುಟ– ೪೪೯.
17. ಎಂ ಬಸವಣ್ಣ: ಈಡಿಪಸ್ ಕಾಂಪ್ಲೆಕ್ಸ್, ಪುಟ– ೧೦೨.
18. (ಎಂ ಬಸವಣ್ಣ: ಈಡಿಪಸ್ ಕಾಂಪ್ಲೆಕ್ಸ್, ಅಭಿನವ ಪ್ರಕಾಶನ ಬೆಂಗಳೂರು, ೨೦೦೭.)
19. ಅದೇ ಪುಟ– ೧೦೨.
20. ಕೆ. ವಿ ತಿರುಮಲೇಶ್: ಅಸ್ತಿತ್ವವಾದ, ಪುಟ– ೯೮
21. (ಕೆ. ವಿ ತಿರುಮಲೇಶ್: ಅಸ್ತಿತ್ವವಾದ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳುರು, ೧೯೯೯.)